# ಒಂದು ಮುಂಜಾವಿನಲಿ..!

■ ಚಿತ್ರ-ಲೇಖನ: ಅಶೋಕ ಉಚ್ಚಂಗಿ



ಮಲೆನಾಡಿಗೆ ಕಾಲಿಟ್ಟ ಮುಂಗಾರಿನ ಮೊದಲ ಮಳೆಯನ್ನು ಸ್ವಾಗತಿಸಲು ಈಚೆಗೆ ಊರಿಗೆ ಹೋಗಿದ್ದೆ. ಬಿಸಿಲಿನ ಬರಡು ಪ್ರಕೃತಿಯನ್ನು ನೋಡಿ ನೋಡಿ ದಣಿದ ಮನಕ್ಕೆ ಮುಂಗಾರಿನ ಮೊದಲ ಮಳೆ ನೀಡುವ ಸಾಂತ್ವನ ಅಷ್ಟಿಷ್ಟಲ್ಲ. ಆರಂಭದ ಮಳೆ ಸಂಗೀತಗಾರನ ಆಲಾಪದ ಹಾಗೆ. ತುಂತುರು ತುಂತುರಾಗಿ ಮೆಲ್ಲನೆ ಆರಂಭವಾಗುವ ಮಳೆ ತಾರಕಕ್ಕೇರಿ ಭೋರ್ಗರೆದು ಹರಿಯುತ್ತದೆ ಎನ್ನುವಷ್ಟರಲ್ಲಿ ಹಾಗೆಯೇ ಇಳಿದು ದಿಢೀರನೆ ನಿಂತು ಬಿಡುತ್ತದೆ. ಸೂರ್ಯ ಮುಂಗಾರ ಮೋಡಗಳ ಸಂದಿಯಲ್ಲಿ ಇಣುಕಿ ತನ್ನ ಇರುವನ್ನು ಸಾರುತ್ತಾನೆ. ಈ ಮಳೆ ಬಿಸಿಲಿನ ಆಟದಲ್ಲಿ ಇಳೆಗೊಂದು ವಿಶೇಷ ಕಳೆ!

8ನೇ ಪುಟ ನೋಡಿ

